ಆಸ್ತಮಾ ನಿಮ್ಮ ಉಸಿರಾಟದ ಮಾರ್ಗವನ್ನು ಕಿರಿದುಗೊಳಿಸಿ, ಊತವನ್ನು ಹೆಚ್ಚಿಸಿ ಹೆಚ್ಚುವರಿ ಲೋಳೆಯನ್ನು ಉತ್ಪತ್ತಿ ಮಾಡುವ ಸ್ಥಿತಿಯಾಗಿದೆ. ಇದರ ಪರಿಣಾಮವಾಗಿ ಉಸಿರಾಟ ಕಷ್ಟವಾಗಬಹುದು, ಇದು ದೈನಂದಿನ ಚಟುವಟಿಕೆಗಳಿಗೆ ಅಡಚಣೆ ಮಾಡಬಹುದು, ಆಸ್ತಮಾ ಆಘಾತದಿಂದ ಜೀವಕ್ಕೇ ಗಂಡಾಂತರವಾಗಲೂ ಬಹುದು.

ಅಲರ್ಜಿಕ್ ರೆಸ್ಪಾನ್ಸ್ ಎಂಬುದು ಅಪಾಯಕಾರಿಯಲ್ಲದ ಅಥವಾ ಪ್ರತಿಯೊಬ್ಬರಲ್ಲೂ ಪ್ರತಿರಕ್ಷಣಾ ಪ್ರತಿಕ್ರಿಯೆ ಉಂಟುಮಾಡದ ಅತಿಸೂಕ್ಷ್ಮವಾದ ಪ್ರತಿರಕ್ಷಣಾ ಪ್ರತಿಕ್ರಿಯೆಯಾಗಿದೆ. ಅಲರ್ಜಿಕ್ ರೆಸ್ಪಾನ್ಸ್ ತುರಿಕೆ ಅಥವಾ ಉರಿಯೂತ ಅಥವಾ ಟಿಷ್ಯೂ ಹಾನಿ ಮುಂತಾದ ಅಪಾಯಕಾರಿ ರೋಗಲಕ್ಷಣಗಳನ್ನೂ ಉಂಟು ಮಾಡಬಹುದು.



# ನೀವು ಆಸ್ತಮಾ ಮತ್ತು ಅಲರ್ಜಿಯಿಂದ ಬಳಲುತ್ತಿರುವಿರೇ?

## ಕಾರಣಗಳು

- ವಾಯುಗಾಮೀ ಪದಾರ್ಥಗಳು, ಉದಾ. ಪರಾಗ, ಗಾಳಿಯಲ್ಲಿನ ಕ್ರಿಮಿಗಳು, ಬೂಷ್ಟಿನ ಕಣಗಳು, ಸಾಕುಪ್ರಾಣಿಗಳ ಶರೀರದ ಹೊಟ್ಟು ಅಥವಾ ಜಿರಳೆ ತ್ಯಾಜ್ಯದ ಕಣಗಳು.
- ಉಸಿರಾಟದ ಸೋಂಕು, ಉದಾ. ನೆಗಡಿ.
- ಶಾರೀರಿಕ ಚಟುವಟಿಕೆ (ವ್ಯಾಯಾಮದಿಂದ ಉಂಟಾಗುವ ಆಸ್ತಮಾ)
- ತಂಪು ಗಾಳಿ
- ವಾಯುಮಾಲಿನ್ಯ ಮತ್ತು ಪರಿಸರ ಮಾಲಿನ್ಯ, ಉದಾ. ಧೂಮಪಾನ
- ಕೆಲವು ಔಷಧಗಳು, ಬೀಟಾ ಬ್ಲಾಕರ್ಸ್, ಆಸ್ಪಿರಿನ್, ಈಬುಪ್ರೊಫೆನ್ (ಅಡ್ವಿಲ್, ಮಾಟ್ರಿನ್ ಐಬಿ ಇತ್ಯಾದಿ) ಮತ್ತು ನ್ಯಾಪ್ರೋಕ್ಸೆನ್ (ಅಲೆವ್)
- ತೀವ್ರವಾದ ಭಾವನೆಗಳು ಮತ್ತು ಒತ್ತಡ
- ಗ್ಯಾಸ್ಟ್ರೋ ಈಸೋಫೇಗಲ್ ರಿಫ್ಲಕ್ಸ್ ಡಿಸೀಸ್ (ಜಿಇಆರ್‌ಡಿ), ಈ ಸ್ಥಿತಿಯಲ್ಲಿ ಉದರದ ಆಮ್ಲಗಳು ಗಂಟಲಿನವರೆಗೆ ಬರುತ್ತವೆ.

## ಲಕ್ಷಣಗಳು

- ಕೆಮ್ಮು
- ಉಸಿರಾಟದ ತೊಂದರೆ
- ದಮ್ಮು
- ನಿಶ್ವಾಸದ ಸಮಯದಲ್ಲಿ ಶಿಳ್ಳೆಯ ಶಬ್ದ – ಮಕ್ಕಳಲ್ಲಿ ಕಂಡು ಬರುವ ಆಸ್ತಮಾದ ಸಾಮಾನ್ಯ ಲಕ್ಷಣ

## ಅಪಾಯಗಳು

- ಅಟೋಪಿಕ್ ಡರ್ಮಟೈಟೀಸ್
- ಆಸ್ತಮಾದ ಹಿನ್ನೆಲೆಯುಳ್ಳ ಕುಟುಂಬದೊಂದಿಗಿನ ರಕ್ತ ಸಂಬಂಧ
- ಹೆಚ್ಚಾದ ತೂಕ

## ಸಮಸ್ಯೆಗಳು

ತೀವ್ರವಾದ ಆಸ್ತಮಾವನ್ನು ನಿರಸನಗೊಳಿಸಲು ಬಳಸಲಾಗುವ ಕೆಲವು ಔಷಧಗಳ ದೀರ್ಘಾವಧಿಯ ಬಳಕೆಯಿಂದ ಉಂಟಾಗುವ ಅಡ್ಡಪರಿಣಾಮಗಳು.

## ಕಾರಣಗಳು

- ಬೀಜಗಳು, ಮೊಟ್ಟೆ, ಹಾಲು, ಗ್ಲುಟೆನ್, ಹಣ್ಣು ಮತ್ತು ತರಕಾರಿಯಂತಹ ಆಹಾರ ಪದಾರ್ಥಗಳು ಸಾಮಾನ್ಯವಾಗಿ ಇದನ್ನು ಪ್ರೇರೇಪಿಸುತ್ತವೆ.
- ಜೇನ್ನೊಣ ಅಥವಾ ಕಣಜದಂತಹ ಕೀಟಗಳ ದಂಶನ (ಕೆಲವೊಮ್ಮೆ ತೀವ್ರವಾದ ಪರಿಣಾಮ ಉಂಟು ಮಾಡುತ್ತವೆ)
- ಪರಾಗ, ಧೂಳು, ಕ್ರಿಮಿಗಳು, ಹುಲ್ಲಿನಂತಹ ಸಸ್ಯಗಳು, ಪ್ರಾಣಿಶರೀರದ ಹೊಟ್ಟು, ಔಷಧಗಳು ಅಥವಾ ರಾಸಾಯನಿಕ ಪದಾರ್ಥಗಳಂತಹ ಪರಿಸರಸಂಬಂಧೀ ಅಂಶಗಳು
- ಹೊರಗಿನ ಶೀತಲವಾದ ಅಥವಾ ಸೆಕೆಯಾದ ವಾತಾವರಣದಿಂದ, ಆಭರಣದಿಂದ ಅಥವಾ ಸೂರ್ಯನ ಬೆಳಕಿನಿಂದ ಉಂಟಾಗುವ ಅಲರ್ಜಿ

## ಲಕ್ಷಣಗಳು

- ತುರಿಕೆ, ಊತ, ಮೂಗು ಸೋರುವಿಕೆ, ಕಣ್ಣಿನಲ್ಲಿ ನೀರು ಬರುವುದು, ಕೆಮ್ಮು, ದಮ್ಮು, ನೆಗಡಿ ಇತ್ಯಾದಿ. ಅಲರ್ಜಿ ಮತ್ತು ತೀವ್ರತೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಿರುತ್ತದೆ.
- ತ್ವಚೆಯ ಸಂಪರ್ಕಕ್ಕೆ ಬರುವ ಪದಾರ್ಥಗಳು, ಉದಾಹರಣೆಗೆ, ಲೇಟೆಕ್ಸ್ ನಂತಹ ಪದಾರ್ಥಗಳೂ ಸಹ ಅಲರ್ಜಿಗೆ ಸಾಮಾನ್ಯವಾಗಿ ಕಾರಣವಾಗಬಹುದು. ಇದನ್ನು ಕಾಂಟಾಕ್ಟ್ ಡರ್ಮಟೈಟೀಸ್ ಅಥವಾ ಎಕ್ಸಿಮಾ ಎನ್ನುತ್ತಾರೆ. ತ್ವಚೆಯ ಅಲರ್ಜಿ ಆಗಾಗ ದದ್ದುಗಳನ್ನು, ಊತ ಅಥವಾ ಉರಿಯೂತವನ್ನು ಉಂಟು ಮಾಡುತ್ತವೆ ಇದನ್ನು "ವೀಲ್ ಅಂಡ್ ಫ್ಲೇರ್" ಪ್ರತಿಕ್ರಿಯೆ ಎನ್ನುತ್ತಾರೆ. ಇದಕ್ಕೆ ಹೈವ್‌ಗಳು ಹಾಗೂ ಆಂಜಿಯೋಎಡಿಮಾ ಗುಣಲಕ್ಷಣಗಳಿರುತ್ತವೆ.
- ಕೀಟಗಳ ದಂಶನದಿಂದ ನಿರ್ದಿಷ್ಟ ಜಾಗದಲ್ಲಿ ದೊಡ್ಡ ಪ್ರಮಾಣದ ಪರಿಣಾಮ ಉಂಟಾಗುತ್ತದೆ (ತ್ವಚೆಯ ಮೇಲಿನ ಕೆಂಪು ಕಲೆ 10 ಸೆಂ.ಮೀ.ನಷ್ಟು ಹೆಚ್ಚಿನ ವಿಸ್ತಾರ ಪಡೆದುಕೊಳ್ಳುತ್ತದೆ). ಇದು ಒಂದರಿಂದ ಎರಡು ದಿನಗಳವರೆಗೆ ಇರುತ್ತದೆ. ಇಮ್ಯೂನೋಥೆರಪಿಯ ನಂತರವೂ ಈ ಪ್ರತಿಕ್ರಿಯೆ ಉಂಟಾಗಬಹುದು.

## ಪಾಸಿಟಿವ್ ಹೋಮಿಯೋಪತಿಕ್ ಚಿಕಿತ್ಸೆ:

ಪಾಸಿಟಿವ್ ಹೋಮಿಯೋಪತಿ ಆಸ್ತಮಾ & ಅಲರ್ಜಿಗಳನ್ನು ಕಾನ್‌ಸ್ಟಿಟ್ಯೂಷನಲ್ ವಿಧಾನದಿಂದ ಪರಿಭಾವಿಸುತ್ತದೆ. ಈ ವಿಧಾನದಲ್ಲಿ ರೋಗಿಗೆ ಪ್ರಶ್ನೆಗಳ ಒಂದು ಪಟ್ಟಿ ನೀಡಲಾಗುತ್ತದೆ. ಅದರ ಆಧಾರದ ಮೇರೆಗೆ ವಿಶ್ಲೇಷಣೆ ಹಾಗೂ ಮೌಲ್ಯಮಾಪನಗಳನ್ನು ಮಾಡಲಾಗುತ್ತದೆ ಮತ್ತು ಸೂಕ್ತವಾದ ಕಾನ್‌ಸ್ಟಿಟ್ಯೂಷನಲ್ ಚಿಕಿತ್ಸೆಗಳನ್ನು ಆಯ್ಕೆ ಮಾಡಲಾಗುತ್ತದೆ. ಕಾಯಿಲೆಯಿಂದ ಬಳಲುವ ವ್ಯಕ್ತಿಗೆ ಚಿಕಿತ್ಸೆ ನೀಡಬೇಕಲ್ಲದೆ ವ್ಯಕ್ತಿಯೊಳಗಿನ ಕಾಯಿಲೆಗೆ ಚಿಕಿತ್ಸೆ ನೀಡಬಾರದು ಎಂದು ಹೋಮಿಯೋಪತಿ ಭಾವಿಸುತ್ತದೆ. ಬಹುತೇಕ ಆಸ್ತಮಾ ಮತ್ತು ಅಲರ್ಜಿಗಳು ಕೌಟುಂಬಿಕ ಹಿನ್ನೆಲೆಯ ಬಳುವಳಿಗಳಾಗಿರುತ್ತವೆ ಮತ್ತು ಪರಿಸರದ ವ್ಯತ್ಯಾಸಗಳ ಫಲಶ್ರುತಿಗಳಾಗಿರುತ್ತವೆ. ಪಾಸಿಟಿವ್ ಹೋಮಿಯೋಪತಿ ಅತ್ಯುತ್ತಮ ಆರೋಗ್ಯಕ್ಕಾಗಿ ಪರಿಣಾಮಕಾರೀ ಹೋಮಿಯೋಪತಿ ಚಿಕಿತ್ಸೆ ನೀಡುವುದಲ್ಲದೆ ಆರೋಗ್ಯವನ್ನು ಕಾಪಾಡಿಕೊಳ್ಳಲು ನಿರ್ವಹಣಾ ಮಾರ್ಗಸೂಚಿಗಳನ್ನು ಸಹ ಒದಗಿಸುತ್ತದೆ.


An ISO 9001 - 2000 Certified ®

The art of healing

**Positive Homeopathy**

ರೂ. 300/- ಕನ್ಸಲ್ಟೇಷನ್ ಶುಲ್ಕವಿಲ್ಲದೆ ಉಚಿತವಾಗಿ ವೈದ್ಯರೊಂದಿಗೆ ಮಾತನಾಡಿರಿ ಕರರಹಿತ ಸಂ.: 1800 313 1818

www.positivehomeopathy.com | Follow us on :

ಕರ್ನಾಟಕ: ಮಲ್ಲೇಶ್ವರಂ ■ ಕೋರಮಂಗಲ ■ ರಾಜಾಜಿನಗರ ■ ಇಂದಿರಾನಗರ ■ ಜಯನಗರ ■ ಹುಬ್ಬಳ್ಳಿ ■ ಮಂಗಳೂರು ■ ಬೆಳಗಾವಿ ■ ದಾವಣಗೆರೆ ■ ಕಲಬುರ್ಗಿ ■ ಮೈಸೂರು । ಆಂಧ್ರಪ್ರದೇಶ